ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಲಾಭಾಂಶವನ್ನು ಪರಿಗಣಿಸುವುದಿಲ್ಲ.

ಆ) ಪ್ರಶ್ನೆ ಸಂಖ್ಯೆ: (ಅ)ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರಾಜ್ಯ ಉಚ್ಚ ನ್ಯಾಯಾಲಯವು ಮೂಲ ಗುತ್ತಿಗೆದಾರರಿಂದಲೇ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆದೇಶ ನೀಡಿರುತ್ತದೆ ಮತ್ತು ಲಾಭಾಂಶದ ಬಗ್ಗೆ ಏನು ಪ್ರಸ್ತಾಪ ಇರುವುದಿಲ್ಲ.

5386(6280) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣಕ್ಕೆ ಬಸ್ ಡಿಪೋ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಬೇಲೂರು ತಾಲ್ಲೂಕಿನ ಸಾರಿಗೆ ಅವಶ್ಯಕತೆಗಳನ್ನು ಬೇಲೂರು ತಾಲ್ಲೂಕಿನ ಸುತ್ತಮುತ್ತ ಇರುವ ಚಿಕ್ಕಮಗಳೂರು, ಅರಸೀಕೆರೆ, ಸಕಲೇಶಪುರ, ಕಡೂರು, ಹಾಸನ ಘಟಕಗಳಿಂದ ಪೂರೈಸಲಾಗುತ್ತಿದೆ. ಬೇಲೂರಿನಿಂದ 35 ಕಿ.ಮೀ. ಅಂತರದಲ್ಲಿ ಮೂಡಿಗೆರೆ ಪಟ್ಟಣದಲ್ಲಿ ನೂತನ ಬಸ್ ಘಟಕವು ಸದ್ಯದಲ್ಲಿ ಪ್ರಾರಂಭಗೊಳ್ಳುವ ಹಂತದಲ್ಲಿರುತ್ತದೆ. ಪ್ರಸ್ತುತ ಬೇಲೂರು ತಾಲ್ಲೂಕಿನ ಪ್ರಯಾಣಿಕರಿಗೆ ಮೇಲ್ಕಂಡ ಬಸ್ ಘಟಕಗಳಿಂದ ಸಾರಿಗೆ ಸೌಕರ್ಯಗಳನ್ನು ಒದಗಿಸಲಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ, ಸದ್ಯಕ್ಕೆ ಬೇಲೂರಿನಲ್ಲಿ ಬಸ್ ಘಟಕ ಸ್ಥಾಪಿಸುವ ಅವಶ್ಯಕತೆ ಕಂಡು ಬರುವುದಿಲ್ಲ.

5387(6281) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಹೊನ್ನೇಮನೆ ಗ್ರಾಮದ ಬಳಿ ವಾಟೆಹೊಳೆ ಜಲಾಶಯದ ಹಿನ್ನೀರಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುತ್ತಿರುವುದು ನಿಜವೆ:

ಆ) ಹಾಗಿದ್ದಲ್ಲಿ, ಕಾಮಗಾರಿ ನಿಂತು ಮೂರು ವರ್ಷಗಳಾದರೂ ಕೆಲಸ ಮುಂದುವರೆಸದಿರಲು ಕಾರಣಗಳೇನು?

ಇ) ಕಾಮಗಾರಿಯನ್ನು ಇಲಾಖೆ ಮುಖಾಂತರ ಪಡೆದು ಪೂರ್ಣಗೊಳಿಸಲಾಗುವುದೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ನಿರ್ಮಿಸಲಾಗುತ್ತಿದೆ.

ಆ) ಮೂಲ ಟೆಂಡರ್ ಗುತ್ತಿಗೆ ರದ್ದು ಪಡಿಸಿದ ನಂತರ ಉಳಿಕೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಇ) ನಿಯಮಾನುಸಾರ ಟೆಂಡರ್ ಮೂಲಕ ಕಾಮಗಾರಿಯನ್ನು ಕೈಗೆತ್ತಿಗೊಂಡು ಪೂರ್ಣ ಗೊಳಿಸಲಾಗುವುದು.